# KANNADA CODE: 015
# 2019 – 20
# MARKING SCHEME

**SUBJECT : KANNADA** **CLASS : X**

**ಅನುಮತಿಸಲಾದ ಸಮಯ : ೩ ಗಂಟೆ** **ಗರಿಷ್ಠ ಅಂಕಗಳು : ೮೦**

Time allowed : 3 hours. Maximum Marks : 80

**ಸೂಚನೆಗಳು : ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.**

---

## A – (Reading Section) : 12 Marks
### ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**ಪ್ರಶ್ನೆ 1. 1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ**

1) ಯಾರು ಸಮಯವನ್ನು ಸರಿಯಾಗಿ, ಸಮರ್ಪಕವಾಗಿ ನಿರ್ವಹಿಸಬಲ್ಲರೋ ಅವರು ಯಶಸ್ಸನ್ನು ಪಡೆಯಬಹುದು. **1**

2) ಸಮಯದ ಬಗ್ಗೆ ಬಲ್ಲವರು **'ಹೊತ್ತೇ ಮುತ್ತು'** ಎಂದು ಹೇಳಿದ್ದಾರೆ. **1**

3) ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ತಡವಾಗಿ ಎದ್ದರೆ ಸರಿಯಾದ ಸಮಯಕ್ಕೆ ಪರೀಕ್ಷಾ ಸ್ಥಳವನ್ನು ಸೇರಲಾಗುವುದಿಲ್ಲ. ಗಡಿಬಿಡಿಯಲ್ಲಿ ಓದಿದ್ದೆಲ್ಲ ಮರೆತುಹೋಗಬಹುದು. **2**

5) ಸಮಯ ಕೂಡ ಹಣವಿದ್ದಂತೆ. ಅದು ಬಹಳ ಬೆಲೆ ಬಾಳುವಂಥದು. ಆದ್ದರಿಂದ ವೇಳೆಯನ್ನು ಬಂಡವಾಳ ಹೂಡಿಕೆಗೆ ಹೋಲಿಸಿದ್ದಾರೆ. **2**

**2. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

1) ಅಜ್ಜನನ್ನು ಮಗುವು **'ಈತನಾರು? ಇಲ್ಲಿ ಏನು ಮಾಡುತ್ತಿದ್ದಾನೆ?'** ಎಂದು ಕೇಳಿತು. **1**

**2)** ಬಾಹುಬಲಿಯ ಸಹೋದರ ಭರತ. **1**

3) ಬಾಹುಬಲಿಯು ಬೆಟ್ಟದ ಮೇಲೆ ನಿಂತು ಹತ್ತುವವರ ಇಳಿಯುವವರ ನೋಡುತ್ತಿರುತ್ತಾನೆ. ನಿಲ್ಲುವವರ ನಡೆಯುವವರ ಲೆಕ್ಕ ಮಾಡುತ್ತಿರುತ್ತಾನೆ. ಬಳಲಿದವರಿಗೆ ಕೈ ನೀಡುತ್ತಾನೆ. **2**

4) ತನ್ನ ಅಮ್ಮ ತನಗೆ ಸ್ನಾನ ಮಾಡಿಸುವ ಮೊದಲು ತನ್ನನ್ನೂ ಬರಿಮೈಯಲ್ಲಿ ನಿಲ್ಲಿಸುತ್ತಾಳೆ. ತನಗೂ ಎಣ್ಣೆ ಹಚ್ಚಿ ಮಜ್ಜನ ಮಾಡಿಸುತ್ತಾಳೆ. ಆದ್ದರಿಂದ ಮಗು ತಾನೂ, ಬಾಹುಬಲಿಯೂ ಒಂದೇ ಎಂದು ಹೇಳುತ್ತದೆ. **2**

## B – (Writing Section) : 15 Marks
### ವಿಭಾಗ – ಬಿ (ಬರವಣಿಗೆಯ ಕೌಶಲ) : 15 ಅಂಕಗಳು

**ಪ್ರಶ್ನೆ 2. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ** **6**

ಪ್ರಬಂಧಕ್ಕೆ ಅಂಕ ನೀಡಿಕೆ ಹೀಗಿರಲಿ : ಪೀಠಿಕೆ – 1/2, ವಿಷಯ – 4, ಭಾಷಾಶೈಲಿ – 1, ಉಪಸಂಹಾರ –1/2,

**ಪ್ರಶ್ನೆ 3. ವ್ಯಾವಹಾರಿಕ ಪತ್ರ** :ಇಂದ, ವಿಳಾಸ – 1/2, ಗೆ, ವಿಳಾಸ 1/2, ದಿನಾಂಕ – 1/2, ಮಾನ್ಯರೆ–1/2, ವಿಷಯ – 1/2, ಪತ್ರದ ಒಡಲು – 2, ಇಂತಿ ನಿಮ್ಮ ವಿಶ್ವಾಸಿ ಮತ್ತು ಸಹಿ – 1/2. **5**

**ಅಥವಾ** ಉದ್ಯೋಗಕ್ಕೆ ಅರ್ಜಿ :ಇಂದ, ವಿಳಾಸ–1/2, ಗೆ, ವಿಳಾಸ – 1/2, ದಿನಾಂಕ–1/2, ಮಾನ್ಯರೆ – 1/2, ವಿಷಯ–1/2, ಒಡಲು ಮತ್ತು ವಿದ್ಯಾರ್ಹತೆ ಇತ್ಯಾದಿ ವಿವರಗಳು–2, ನಿಮ್ಮ ವಿಶ್ವಾಸಿ, ಸಹಿ–1/2.

**ಪ್ರಶ್ನೆ 4. ವರದಿ :** ಶೀರ್ಷಿಕೆ – 1/2, ದಿನಾಂಕ – 1/2, ಸ್ಥಳ – 1/2, ವರದಿಯ ಒಡಲು/ವಿವರಣೆ – 2, ವರದಿಗಾರರ ರುಜು – 1/2. **4**

## C – (Grammar) : 18 Marks
### ವಿಭಾಗ – ಸಿ (ಅನ್ವಯಿಕ ವ್ಯಾಕರಣ) : 18 ಅಂಕಗಳು

**ಪ್ರಶ್ನೆ 5. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.**

1. ಈ ಪದಗಳಿಗೆ ತತ್ಸಮ/ತದ್ಭವಗಳನ್ನು ಬರೆಯಿರಿ : ವಂಸ, ವರ್ಣ. **1**
2. ಈ ಪದಗಳ ಗ್ರಾಂಥಿಕ ರೂಪ ಬರೆಯಿರಿ : ಹೀಗೆ, ಕಳುಹಿಸಿದ್ದಾರೆ. **1**
3. ಈ ವಾಕ್ಯವನ್ನು ಸಂಭಾವನಾರ್ಥಕ ವಾಕ್ಯವಾಗಿಪರಿವರ್ತಿಸಿ : ಮಕ್ಕಳು ಪುಸ್ತಕಗಳನ್ನು ಓದಿಯಾರು ಅಥವಾ ಓದಬಹುದು.
4. ವಿಭಕ್ತಿ ಪ್ರತ್ಯಯವನ್ನು ಹೆಸರಿಸಿರಿ : ಸಪ್ತಮೀ ವಿಭಕ್ತಿ ಪ್ರತ್ಯಯ, ಚತುರ್ಥಿ ವಿಭಕ್ತಿ ಪ್ರತ್ಯಯ. **2**
5. ಕರ್ಮಣಿ ವಾಕ್ಯಕ್ಕೆ ಪರಿವರ್ತಿಸಿ : ವಿಶ್ವೇಶ್ವರಯ್ಯನವರಿಂದ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಲ್ಪಟ್ಟಿತು. **1**
6. ಪದಗಳ ಧಾತುರೂಪ : ಮಾಡು, ಉಣ್ಣು. **1**
7. ನುಡಿಗಟ್ಟನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ : (ವಾಕ್ಯ ರಚನೆಯ ರೀತಿ, ಅರ್ಥ ನೋಡಿ ಅಂಕ ಕೊಡುವುದು) **ಘಾಸಿಗೊಳಿಸು –** ಬೇಟೆಗಾರನು ಬಾಣ ಬಿಟ್ಟು ಪಕ್ಷಿಯನ್ನು ಘಾಸಿಗೊಳಿಸಿದನು.
   **ಒಳಗಿಂದೊಳಗೆ** : ಕೃಷ್ಣ ಹೇಳಿದ ತನ್ನ ಜನ್ಮರಹಸ್ಯ ಕೇಳಿ ಕರ್ಣ ಒಳಗಿಂದೊಳಗೆ ಬೆಂದುಹೋದನು. **2**
8. ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ : ಬಲ್ಲೆನೆಂದು–ಬಲ್ಲೆನು+ಎಂದು=ಲೋಪ ಸಂಧಿ, ನಿಜಾಶ್ರಮ–ನಿಜ+ಆಶ್ರಮ=ಸವರ್ಣದೀರ್ಘ ಸಂಧಿ. **2**
9. ಈ ಪದಗಳನ್ನು ವಿಗ್ರಹಿಸಿ, ಸಮಾಸದ ಹೆಸರು ತಿಳಿಸಿ :
   ಗಿರಿವನದುರ್ಗಗಳು=ಗಿರಿಯೂ+ವನವೂ+ದುರ್ಗವೂ=ದ್ವಂದ್ವ ಸಮಾಸ,
   ಹೊಗೆದೋರು=ಹೊಗೆಯನ್ನು+ತೋರು=ಕ್ರಿಯಾ ಸಮಾಸ. **2**
10. ಈ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ : ಸುಳ್ಳು, ಭೂಮಿ. **1**

11. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ : ರೂಢನಾಮ, ಅನುಕರಣಾವ್ಯಯ. **1**

12. ವಿರುದ್ಧ ಪದ ಬರೆಯಿರಿ : ನಿರ್ಭಯ, ನಿಂದೆ. **1**

13. ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ : ಜನರು ಮಳೆಗಾಗಿ ದೇವರನ್ನು ಪ್ರಾರ್ಥಿಸುತ್ತಾರೆ. **1**

14. ಗಾದೆ ಮಾತಿನ ವಿಸ್ತರಣೆ:ಅಂಕ ನೀಡಿಕೆ : ಪೀಠಿಕೆ/ಹೊರ ಅರ್ಥ–1, ಒಳ ಅರ್ಥ–1. **2**

ಅ) ತಾಳಿದವನು ಬಾಳಿಯಾನು:ಬದುಕಿನಲ್ಲಿ ಸಹನೆ, ತಾಳ್ಮೆ ಬಹಳ ಅಗತ್ಯ. ಅವುಗಳ ಮಹತ್ವವನ್ನಿದು ತಿಳಿಸುತ್ತದೆ.

ಆ) ಮನಸ್ಸಿದ್ದರೆ ಮಾರ್ಗ : ಏನನ್ನೇ ಸಾಧಿಸಲು ಮನಸ್ಸು ಇಚ್ಛಾಶಕ್ತಿ ಬಹಳ ಮುಖ್ಯ. ಇಚ್ಛಾಶಕ್ತಿ ಬಲವಾಗಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದನ್ನು ಇದು ತಿಳಿಸಿಕೊಡುತ್ತದೆ.

## D – Literature Section : (Text – Part 1 – Prose and Poetry) : 35 Marks
## ವಿಭಾಗ – ಡಿ (ಪಠ್ಯಗಳ ಅಧ್ಯಯನ) : 35 ಅಂಕಗಳು

**ಪ್ರಶ್ನೆ 6. ಬಹುಆಯ್ಕೆಯ ಪ್ರಶ್ನೆಗಳ ಸರಿಯಾದ ಉತ್ತರ.** **10**

1. ಮತಂಗ
2. ಸ್ಟೇಶನರಿ
3. ಖಿರ್ದಿ ಪುಸ್ತಕ
4. ಹೊಸರಕ್ತ.
5. ಪ್ರಜ್ಞೆ
6. ಭಾಮಿನಿ
7. ಪಕ್ಷಿಕಾಶಿ
8. ರನ್ನ
9. ಜೈಮಿನಿಭಾರತ
10. ಬಾಗಲಕೋಟೆ.

**ಪ್ರಶ್ನೆ 7. ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** **3 X4=12**

1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1900ರಲ್ಲಿ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ಇದು ಭಾರತ ಮಾತ್ರವಲ್ಲ, ಏಷ್ಯಾ ಖಂಡದಲ್ಲಿಯೇ ಮೊಟ್ಟಮೊದಲ ಜಲವಿದ್ಯುತ್ ಯೋಜನೆಯಾಗಿದೆ. ನಂತರ 1907ರಲ್ಲಿ ವಾಣಿವಿಲಾಸ ಸಾಗರ ಕಟ್ಟಲ್ಪಟ್ಟಿತು. ಇದನ್ನು ಮಾರಿಕಣಿವೆ ಜಲಾಶಯ ಎಂದೂ ಕರೆಯುತ್ತಾರೆ. 1911ರಲ್ಲಿ ಕೃಷ್ಣರಾಜಸಾಗರ ಆಣೆಕಟ್ಟೆಯನ್ನು ನಿರ್ಮಿಸಲಾಯಿತು. ಇದು ಅವರ ಬೃಹತ್ ಮುಂಗಾಣ್ಕೆಯ ಕೊಡುಗೆಯಾಗಿದೆ. ಇವೆಲ್ಲ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯರೂಪಕ್ಕೆ ಬಂದ ನೀರಾವರಿ ಯೋಜನೆಗಳಾಗಿವೆ.

2. ಪಾಠ – ಎದೆಗೆ ಬಿದ್ದ ಅಕ್ಷರ. 1/2 ಲೇಖಕರು : ದೇವನೂರು ಮಹಾದೇವ. 1/2
ಸಿದ್ದಲಿಂಗಯ್ಯನವರು ಮನೆಮಂಚಮ್ಮನ ಕಥೆ ಹೇಳುವಾಗ ಲೇಖಕರಿಗೆ ಇದನ್ನು ಹೇಳಿದರು.1/2
ಸಂದರ್ಭ : ಒಮ್ಮೆ ಒಂದು ಗ್ರಾಮದ ಜನರೆಲ್ಲ ಗ್ರಾಮದೇವತೆ ಮನೆಮಂಚಮ್ಮನಿಗೆ ಗುಡಿ ಕಟ್ಟತೊಡಗುತ್ತಾರೆ. ಆಗ ದೇವತೆ ಒಬ್ಬನ ಮೈಮೇಲೆ ಬಂದು ನಿಮಗೆಲ್ಲರಿಗೂ ಮನೆಯಿದೆಯೆ ಎಂದು ಕೇಳುತ್ತಾಳೆ. ಒಬ್ಬ 'ಇಲ್ಲ' ಎನ್ನುತ್ತಾನೆ. ಆಗ ದೇವತೆ ಎಲ್ಲರಿಗೂ ಮನೆ ಆಗುವವರೆಗೆ ನನಗು ಮನೆ ಬೇಡ ಎನ್ನುತ್ತಾಳೆ.
ಸ್ವಾರಸ್ಯ : ದೇವತೆಯ ಮೂಲಕ ಒಬ್ಬ ಭಕ್ತ ಜನರಿಗೆ ಮನೆಯಿಲ್ಲದಿರುವುದನ್ನು ಎಲ್ಲರ ಗಮನಕ್ಕೆ ತರುತ್ತಾನೆ. ದೇವರಿಗಿಂತಲೂ ಮೊದಲು ಜನರಿಗೆ ವಾಸಿಸಲು ಮನೆಗಳು ಅಗತ್ಯ ಎಂಬುದನ್ನು ಇದು ತಿಳಿಸಿಕೊಡುತ್ತದೆ.

**ಅಥವಾ**

ಪಾಠ –ವ್ಯಾಘ್ರಗೀತೆ 1/2 ಲೇಖಕರು : ಎ. ಎನ್. ಮೂರ್ತಿರಾವ್. 1/2
ಸಂದರ್ಭ: ಶಾನುಭೋಗರ ಮೇಲೆ ಹಿಂದಿನಿಂದ ಆಕ್ರಮಣ ಮಾಡಬಹುದೇ ಬೇಡವೇ ಎಂದು ಗೊಂದಲದಲ್ಲಿ ಸಿಲುಕಿಕೊಂಡ ಸಂದರ್ಭದಲ್ಲಿ ಹಿಲಿಯು ತನಗೆ ತಾನೇ ಈ ಮಾತನ್ನು ಹೇಳಿಕೊಂಡಿತು. 1/2

ವಿವರಣೆ : ನಾವು ಹುಟ್ಟಿ ಬೆಳೆದ, ನಮ್ಮ ಸ್ವಂತ ಧರ್ಮದಲ್ಲಿಯೇ ಸಾಯುವುದು ಅತ್ಯಂತ ಶ್ರೇಷ್ಠವಾದದ್ದು ಎಂಬುದು ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ ಈ ಮಾತಿನ ಅರ್ಥವಾಗಿದೆ. ಅಂದರೆ ಪ್ರತಿಯೊಬ್ಬರಿಗೂ ಅವರವರದೇ ಆದ ಜೀವನ ಧರ್ಮವಿರುತ್ತದೆ. ಹಾಗೆಯೇ ಹುಲಿಗೂ ಕೂಡ ಅದರದೇ ಆದ ಧರ್ಮವಿದೆ. ಅದರಂತೆ ಬದುಕುವುದರಲ್ಲಿಯೇ ಬದುಕಿನ ಸಾರ್ಥಕತೆ ಅಡಗಿರುತ್ತದೆ. ಪ್ರತಿಯೊಬ್ಬರೂ ಕೊನೆಯವರೆಗೂ ತಮ್ಮ ಸ್ವಧರ್ಮದಲ್ಲೇ ಬದುಕಿದಾಗ ಅವರ ಬದುಕಿಗೆ ಸಫಲತೆ ಬರುತ್ತದೆ ಎಂಬುದು ಇದರ ಅರ್ಥವಾಗಿದೆ.

3. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟೀಷರು ಆಡಳಿತ ಸೂತ್ರ ಹಿಡಿದರು. 1857ರ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರು ಬ್ರಿಟಿಷ್ ಸರಕಾರದ ಅನುಮತಿಯಿರದೆ ಶಸ್ತ್ರಾಸ್ತ್ರಗಳನ್ನು ಹೊಂದಿರಬಾರದು ಎಂದು ಆದೇಶ ಹೊರಡಿಸಿದರು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು. ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎಬ್ಬಿಸಿ ಹೆಬಲಕ್ ಎಂಬ ಅಧಿಕಾರಿಯನ್ನು ಕೊಲೆಗೈದರು. ಇದರಿಂದ ಕ್ರೋಧಗೊಂಡ ಕಾರಸಾಹೇಬ ಕಲಾದಗಿಯಿಂದ ಸೈನ್ಯ ತರಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗುಬಡಿದನು. ಇದು ಹಲಗಲಿಯ ದಂಗೆಯ ಕಾರಣ ಮತ್ತು ಸರಕಾರ ಅದನ್ನು ನಿಯಂತ್ರಿಸಿದ ಬಗೆಯಾಗಿದೆ.

4. ಪದ್ಯ – ಸಂಕಲ್ಪಗೀತೆ. 1/2 ಕವಿ : ಜಿ. ಎಸ್. ಶಿವರುದ್ರಪ್ಪ. 1/2
ಸಂದರ್ಭ : ಬದಲಾಗುತ್ತಿರುವ ಕಾಲಘಟ್ಟದಲ್ಲಿ ದೇಶದ ಅಗತ್ಯತೆಗೆ ಅನುಗುಣವಾಗಿ ಭಾರತೀಯರು ಹೇಗೆ ಬಾಳಿ ಮುನ್ನಡೆಯಬೇಕು ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಕವಿ ಓದುಗರಿಗೆ ಈ ಮಾತನ್ನು ಹೇಳಿದ್ದಾರೆ. 1/2
ಸ್ವಾರಸ್ಯ : ಎಲ್ಲರೂ ಏಕತೆಯಿಂದ ಬಾಳಬೇಕಾದುದು ಇಂದಿನ ಅಗತ್ಯತೆಯಾಗಿದೆ. ಹಳೆಯದನ್ನೆಲ್ಲ ಮರೆತು ಹೊಸ ಆಶಾಭಾವನೆಯೊಂದಿಗೆ ಹೊಸ ದೃಷ್ಟಿಕೋನದಿಂದ ಹೊಸ ತಿಳುವಳಿಕೆಯಿಂದ ಬದುಕಬೇಕೆಂಬ ಸಂಕಲ್ಪವನ್ನು ನಾವೆಲ್ಲರೂ ಮಾಡಬೇಕು ಎಂಬುದು ಇದರ ಸ್ವಾರಸ್ಯವಾಗಿದೆ.

**ಅಥವಾ**

ಪದ್ಯ – ಛಲಮನೆ ಮೆರೆವೆಂ. 1/2 ಕವಿ : ರನ್ನ. 1/2.
ಸಂದರ್ಭ : ದುರ್ಯೋಧನ ಭೀಷ್ಮರನ್ನು ಕಾಣಲು ಬಂದನು. ಭೀಷ್ಮರು ಪಾಂಡವರೊಡನೆ ಸಂಧಿ ಮಾಡಿಕೋ ಎಂದಾಗ ಆತ ಅವರಿಗೆ ಈ ಮಾತನ್ನು ಹೇಳಿದನು.
ಸ್ವಾರಸ್ಯ : ಭೀಷ್ಮರು ಪಾಂಡವರೊಡನೆ ಸಂಧಿ ಮಾಡಿಕೊಂಡು ನೀನೊಬ್ಬನಾದರೂ ಬದುಕಿರು ಎಂದರು. ಆಗ ದುರ್ಯೋಧನ ನನ್ನವರನ್ನೆಲ್ಲ ಕಳೆದುಕೊಂಡು ಬದುಕಿದ್ದರೂ ಪ್ರಯೋಜನವೇನು? ನಾನು ನೆಲಕ್ಕಾಗಿ ಹೋರಾಡುವುದಿಲ್ಲ ಅದರ ಬದಲಿಗೆ ನನ್ನ ಛಲಕ್ಕಾಗಿ ಹೋರಾಡುತ್ತೇನೆ ಎನ್ನುತ್ತಾನೆ. ದುರ್ಯೋಧನನ ಹಠ ಮತ್ತು ಛಲವನ್ನು ನಾವಿಲ್ಲಿ ಕಾಣಬಹುದು.

**ಪ್ರಶ್ನೆ 8. ಈ ಕೆಳಗಿನ ಪ್ರಶ್ನೆಗಳಿಗೆ 7–8 ವಾಕ್ಯಗಳಲ್ಲಿ ಉತ್ತರಿಸಿರಿ. 4X2=8**

1. ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.
ಯುದ್ಧ ಇತಿಹಾಸದುದ್ದಕ್ಕೂ ನಡೆದುಕೊಂಡೇ ಬಂದಿದೆ. ಇಂದಿಗೂ ನಡೆಯುತ್ತಲೇ ಇದೆ. ಈ

ಯುದ್ಧದ ಭೀಕರತೆಯು ಧರ್ಮ, ದೇಶಗಳ ಭೇದವಿಲ್ಲದೆ ಅದರಲ್ಲಿ ಭಾಗಿಯಾದ ಸೈನಿಕರಿಗೂ ಅವರ ಕುಟುಂಬದವರಿಗೂ ನಾನಾ ಸಂಕಷ್ಟಗಳನ್ನು ತಂದೊಡ್ಡುತ್ತದೆ. ದೇಶಕ್ಕೂ ಬಹಳ ನಷ್ಟವಾಗುತ್ತದೆ. ಅಪಾರ ಆಸ್ತಿಪಾಸ್ತಿಗಳು ನಾಶವಾಗುತ್ತವೆ.

ಎರಡೂ ದೇಶಗಳ ನಡುವೆ ಅಪಾರ ಸಾವು–ನೋವುಗಳು ಸಂಭವಿಸುತ್ತವೆ. ಇದು ಎಲ್ಲರಿಗೂ ನೋವನ್ನುಂಟುಮಾಡುತ್ತದೆ.ಸಂಪತ್ತು ಹೋದರೆ ಮತ್ತೆ ಗಳಿಸಬಹುದು. ಆದರೆ ಪ್ರಾಣ ಹೋದರೆ ಮತ್ತೆ ಮರಳಿ ತರಲಾಗುವುದಿಲ್ಲ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ದೇಶಗಳಿಗೆ ಗಡಿಯಿರಬಹುದೇ ಹೊರತು ಸಂಕಟಕ್ಕೆ ಗಡಿಯಿಲ್ಲ. ನಾವಿಂದು ಇಪ್ಪತ್ತೊಂದನೆಯ ಶತಮಾನದಲ್ಲಿದ್ದೇವೆ. ದ್ವೇಷ–ರೋಷಗಳನ್ನು ಮರೆತು ಮಾನವರೆಲ್ಲರೂ ಒಂದೇ ಎಂಬ ವಿಶ್ವ ಮಾನವತ್ವದಿಂದ ಬದುಕಬೇಕಾಗಿದೆ. ಆಗಲೇ ಬದುಕು ಸಾರ್ಥಕವಾಗುತ್ತದೆ.

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾದ ಬಗೆಯನ್ನು ವಿವರಿಸಿ.

ದುಷ್ಟಬುದ್ಧಿ ಧರ್ಮಬುದ್ಧಿಗೆ ಮೋಸಮಾಡಿ ವ್ಯಾಪಾರದಲ್ಲಿ ಬಂದ ಸಂಪೂರ್ಣ ಹಣವನ್ನು ತಾನೇ ಲಪಟಾಯಿಸಬೇಕೆಂದು ಯೋಚಿಸಿದನು. ಅದಕ್ಕಾಗಿ ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿದನು. ಅಡಗಿಸಿಟ್ಟಿದ್ದ ಹಣವನ್ನೆಲ್ಲ ಧರ್ಮಬುದ್ಧಿಯೇ ದೋಚಿದನೆಂದು ಹೇಳಿದನು. ಆತನನ್ನು ನ್ಯಾಯ ಪಂಚಾಯಿತಿಗೆ ಕರೆದನು. ಧರ್ಮಬುದ್ಧಿಯೇ ಕಳ್ಳತನ ಮಾಡಿದ್ದಾನೆ ಎನ್ನುವುದಕ್ಕೆ ವೃಕ್ಷದೇವತೆಯಿಂದಲೇ ಸಾಕ್ಷಿ ಹೇಳಿಸುವುದಾಗಿ ಹೇಳಿದನು. ಇದಕ್ಕಾಗಿ ತನ್ನ ತಂದೆಯನ್ನೇ ಮರದೊಳಗೆ ಅಡಗಿಸಿಟ್ಟು ಸುಳ್ಳು ಸಾಕ್ಷಿ ಹೇಳುವಂತೆ ಮಾಡಿದನು. ಆದರೆ ಧರ್ಮಬುದ್ಧಿಗೆ ಈತನ ವಂಚನೆಯೆಲ್ಲ ಗೊತ್ತಾಗಿಹೋಯಿತು. ಅಡಗಿಸಿಟ್ಟ ಧನವನ್ನು ಹಾವು ಸುತ್ತಿಕೊಂಡಿದೆಯೆಂದೂ, ಅದನ್ನು ಓಡಿಸಲು ಮರಕ್ಕೆ ಬೆಂಕಿ ಹಾಕಬೇಕೆಂದೂ ಹೇಳಿದನು. ಮರಕ್ಕೆ ಬೆಂಕಿ ಹಚ್ಚಿದ್ದರಿಂದ ಆತನ ತಂದೆ ಅಲ್ಲೇ ಸುಟ್ಟು ಸತ್ತುಹೋದನು. ಎಲ್ಲರಿಗೂ ಸತ್ಯ ಗೊತ್ತಾಯಿತು. ಇದರಿಂದ ಪೂರ್ಣ ಧನವನ್ನೂ, ಜನ್ಮ ಕೊಟ್ಟ ತಂದೆಯನ್ನೂ ಆತ ಕಳೆದುಕೊಂಡನು. ಆತನ ಅತಿಯಾಸೆ ಅವನನ್ನೇ ಹಾಳುಮಾಡಿತು. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾಯಿತು.

2. ಇರುಳಳಿದು ಬೆಳಕಾದಾಗ, ಬೆಳಕಳಿದು ಕತ್ತಲಾದಾಗ ಕಾಲವೆಂಬ ಹಕ್ಕಿ ಹಾರುತ್ತಲೇ ಇರುತ್ತದೆ. ಕಣ್ಮುಚ್ಚಿ ತೆರೆಯುವುದರೊಳಗಾಗಿ ಅದು ಗಾವುದ ಗಾವುದ ಮುಂದೆ ಹೋಗಿರುತ್ತದೆ. ಅದಕ್ಕೆ ಹಗಲು ರಾತ್ರಿ ಎಂಬ ಕಪ್ಪು ಬಿಳುಪಿನ ಎರಡು ರೆಕ್ಕೆಗಳಿವೆ. ಸೂರ್ಯ–ಚಂದ್ರರು ಅದರ ಕಣ್ಣುಗಳಾಗಿವೆ. ನಕ್ಷತ್ರಗಳ ಮಾಲೆಯನ್ನು ಅದು ಧರಿಸಿಕೊಂಡಿದೆ. ಕಾಲದ ಹಕ್ಕಿ ರಾಜ್ಯದ ಸಾಮ್ರಾಜ್ಯದ ತೆನೆಗಳನ್ನು ಒಕ್ಕಿ, ಮಂಡಲಗಳನ್ನು ಗಡಗಡ ಮುಕ್ಕಿ, ಸಾರ್ವಭೌಮರ ನೆತ್ತಿಯನ್ನು ಕುಕ್ಕಿ ಅಂದರೆ ರಾಜರನ್ನೆಲ್ಲ ಸಾಯಿಸಿ ಅದು ಮುಂದಕ್ಕೋಡುತ್ತದೆ. ಕಾಲ ಯುಗಯುಗಗಳ ಹಣೆಬರಹವನ್ನೇ ಬದಲಿಸುತ್ತದೆ. ಖಂಡಖಂಡಗಳನ್ನೆಲ್ಲ ತೇಲಿಸಿ ತೇಲಿಸಿ ಮುಳುಗಿಸಿಬಿಡುತ್ತದೆ. ಹೊಸಗಾಲದ ಹಸುಮಕ್ಕಳನ್ನು ಅದು ಹರಸುತ್ತದೆ. ಅದು ಮಂಗಳಲೋಕದ ಅಂಗಳಕ್ಕೂ ಏರಬಲ್ಲದು. ಭೂಮಿ–ಆಕಾಶಗಳ ಆಚೆಗೂ ಅದು ತನ್ನ ಕೊಕ್ಕನ್ನು ಚಾಚುತ್ತದೆ. ಒಟ್ಟಾರೆ ಕಾಲದ ಚಕ್ರದಲ್ಲಿ ಎಲ್ಲರೂ, ಎಲ್ಲವೂ ಸಿಲುಕಿವೆ. ಯಾರನ್ನೂ ಅದು ಶಾಶ್ವತವಾಗಿಟ್ಟಿಲ್ಲ. ಹಾಗೆಂದು ನಾಶವನ್ನೂ ಮಾಡಿಲ್ಲ. ಹಸುಮಕ್ಕಳನ್ನು ಹರಸಿ ಹೊಸ ಬದುಕಿಗೆ ನಾಂದಿ ಹಾಡುತ್ತದೆ. ಒಟ್ಟಾರೆ ಕಾಲದ ಹಕ್ಕಿ ವಿರಾಟ್ ಸ್ವರೂಪವನ್ನು ಹೊಂದಿದ್ದು ಅದರ ಲೀಲೆ ಅಪಾರವೆಂದು ಹೇಳುತ್ತ ಕವಿ ಬೇಂದ್ರೆಯವರು ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತ ವಿವರಿಸಿದ್ದಾರೆ.



**ಅಥವಾ**

ಕರ್ಣನ ನಿರ್ಧಾರ ಸರಿ. ಏಕೆಂದರೆ ಕರ್ಣನು ನ್ಯಾಯ, ನೀತಿಗೆ ಬೆಲೆ ಕೊಟ್ಟು ದುರ್ಯೋಧನನಿಗೆ ದ್ರೋಹ ಮಾಡಬಾರದೆಂಬ ಕಾರಣದಿಂದ ಸ್ವತಃ ಕೃಷ್ಣನೇ ಬಂದು ಪಾಂಡವರು ನಿನ್ನ ಸಹೋದರರೆಂದು ಹೇಳಿದರೂ ಕರ್ಣ ಪಾಂಡವರ ಜೊತೆ ಸೇರಿ ದುರ್ಯೋಧನನ ಮೇಲೆ ಯುದ್ಧ ಮಾಡಲಿಲ್ಲ. ಬದಲಿಗೆ ದುರ್ಯೋಧನನನ್ನು ತನ್ನ ಆಪ್ತ ಗೆಳೆಯ ಹಾಗೂ ಕಷ್ಟ ಕಾಲದಲ್ಲಿ ಕೈಹಿಡಿದವನು. ನನ್ನನ್ನು ಸೂತನ ಮಗನೆಂದು ಜನರು ಅಪಮಾನಿಸಿದಾಗ ರಾಜ್ಯದ ಒಂದು ಭಗವನ್ನೇ ಕೊಟ್ಟು ತನ್ನನ್ನು ರಾಜನನ್ನಾಗಿ ಮಾಡಿದನು. ಇದರಿಂದ ಕರ್ಣ ದುರ್ಯೋಧನನ ಋಣ ತನ್ನ ಮೇಲಿದೆ ಹಾಗೂ ಈ ಬಾರಿ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರನ್ನು ಸೋಲಿಸಿ ದುರ್ಯೋಧನನ ಋಣವನ್ನು ಸ್ವಲ್ಪವಾದರೂ ತೀರಿಸಬೇಕೆಂಬ ಉದ್ದೇಶದಿಂದ ಕರ್ಣ ಪಾಂಡವರ ವಿರುದ್ಧ ಯುದ್ಧ ಮಾಡುತ್ತಾನೆ. ಕೃಷ್ಣ ಎಷ್ಟೇ ರಾಜ್ಯದ, ಅಧಿಕಾರದ ಲೋಭ, ಮೋಹಗಳನ್ನು ತೋರಿದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಅದಕ್ಕೆ ವ್ಯಾಮೋಹಪಡದೆ ದುರ್ಯೋಧನನ ಪರವಾಗಿ ನಿಲ್ಲುತ್ತಾನೆ. ದುರ್ಯೋಧನನ ಸಂತೋಷವೇ ತನ್ನ ಸಂತೋಷ ಎನ್ನುತ್ತಾನೆ. ಇದರಿಂದ ನಾವು ಕರ್ಣನ ಸ್ನೇಹ ಮತ್ತು ಆತ ದುರ್ಯೋಧನನ ಮೇಲಿಟ್ಟಿರುವ ನಂಬಿಕೆಯನ್ನು ಕಾಣಬಹುದು. ಉದಾತ್ತ ಭಗಳ, ಮೌಲ್ಯಗಳ ಸಂಗಮ ಕರ್ಣ. ಈ ಎಲ್ಲ ಹಿನ್ನೆಲೆಯಲ್ಲಿ ನಾನು ಕರ್ಣನ ನಿರ್ಧಾರ ಸರಿ ಎನ್ನುತ್ತೇನೆ.

## Part 2 : Nondetailed : (5 Marks)

### (ಪಠ್ಯ ಪೋಷಕ ಅಧ್ಯಯನ )

**ಪ್ರಶ್ನೆ 9. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ.** **1X5=5**

1. ಮಾನವನ ದೈಹಿಕ ಹಸಿವನ್ನು ಹಿಂಗಿಸುವುದಕ್ಕೆ ವಿವೇಕಾನಂದರು ಮೊದಲನೆಯ ಆದ್ಯತೆಯನ್ನು ನೀಡಬೇಕೆಂದಿದ್ದಾರೆ.
2. ವಸಂತ ಪುಟ್ಟ ಪೋರಿಗೆ ಮುಖ ತೋರಲಿಲ್ಲ. ಆತ ಪುಟ್ಟ ಪೋರಿಯಂತಹ ಬಡವರಿಗೆ, ಕಮ್ಮಾರ, ಕುಂಬಾರ, ನೇಕಾರ ಮತ್ತು ಕೇರಿಯ ಮಾರನಂಥವರಿಗೆ ಮುಖ ತೋರಲಿಲ್ಲ.
3. "ಏಪ್ರಿಲ್ –13–1919ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ" ಎಂಬುದು ಜಲಿಯನ್‌ವಾಲಾಭಾಗ್‌ನಲ್ಲಿರುವ ಒಕ್ಕಣೆಯಾಗಿದೆ.
4. ಸುಂದರಿ ಹಾಗೂ ಅವಳ ತಂದೆ ಅತ್ಯಂತ ಸರಳವಾದ ಜೀವನವನ್ನು ನಡೆಸುತ್ತಿದ್ದರು. ಅವರಿಗೆ ಅಷ್ಟೊಂದು ಆಸೆಗಳೂ ಇರಲಿಲ್ಲ. ಆದ್ದರಿಂದ ಬಡತನ ಸುಂದರಿ ಹಾಗೂ ಅವಳ ತಂದೆಗೆ 5. ಕಷ್ಟವಾಗಲಿಲ್ಲ.
5. "ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ,<br>ಮೈಯೊಳಗೆ ನವಗಾಯ ಒಂಬತ್ತು ತುಂಡ<br>ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ<br>ರಾಯ ರಾಯರಿಗೆಲ್ಲ ತಾನೆ ಪ್ರಚಂಡ"<br>ಇದು 'ಅಂಗಿ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯಾಗಿದೆ.

********************